# ಕೃಷಿ ಉತ್ಪನ್ನ (ಶ್ರೇಣೀಕರಿಸುವ ಮತ್ತು ಗುರುತು ಹಾಕುವ) ಅಧಿನಿಯಮ, 1937

04.05.2006ರ ಭಾರತ ವಿಶೇಷ ರಾಜಪತ್ರದ IXನೇ ಭಾಗದ 1ನೇ ವಿಭಾಗದ 33ನೇ ಸಂಪುಟದ 1ನೇ ಸಂಚಿಕೆಯಲ್ಲಿ 62 ರಿಂದ 66ರ ವರೆಗಿನ ಪುಟಗಳಲ್ಲಿ ಪ್ರಕಟವಾಗಿದೆ

**ವಿಷಯಾನುಕ್ರಮಣಿಕೆ**

**ಪ್ರಕರಣಗಳು:**

1. ಚಿಕ್ಕ ಹೆಸರು ಮತ್ತು ವ್ಯಾಪ್ತಿ

2. ವಿವರಣೆಗಳು

3. ಶ್ರೇಣಿಯ ಹೆಸರುಗಳನ್ನು ನಿಯಮಿಸುವುದು

3ಎ. ಪ್ರವೇಶ, ಪರಿಶೀಲನೆ ಮತ್ತು ಶೋಧನೆಯ ಅಧಿಕಾರಗಳು

3ಬಿ. ಕೃಷಿ ಉತ್ಪನ್ನವನ್ನು ಅಭಿಗ್ರಹಿಸಲು ಅಧಿಕೃತಗೊಂಡ ಅಧಿಕಾರಿಯ ಅಧಿಕಾರಗಳು

4. ಶ್ರೇಣಿ ಹೆಸರಿನ ಗುರುತನ್ನು ಅನಧಿಕೃತವಾಗಿ ಗುರುತು ಮಾಡುವುದಕ್ಕೆ ದಂಡನೆ

5. ಶ್ರೇಣಿಯ ಹೆಸರಿನ ಗುರುತನ್ನು ಖೋಟಾ ಮಾಡಿ ಹಾಕಿದ್ದಕ್ಕಾಗಿ ದಂಡನೆ

5ಎ. ತಪ್ಪಾಗಿ ಶ್ರೇಣಿಕರಿಸಲಾದ ವಸ್ತುಗಳನ್ನು ಮಾರಾಟ ಮಾಡಿದ್ದಕ್ಕೆ ದಂಡನೆ

5ಬಿ. ಕೆಲವು ವಸ್ತುಗಳ ಸಂಬಂಧದಲ್ಲಿ ಕಡ್ಡಾಯವಾಗಿ ಶ್ರೇಣಿಯ ಹೆಸರುಗಳನ್ನು ನಿಯಮಿಸುವ ಅಧಿಕಾರ

5ಸಿ. ಪ್ರಾಸಿಕ್ಯೂಷನ್ ಹೂಡುವುದು

6. ಅಧಿನಿಯಮದ ಅನ್ವಯದ ವಿಸ್ತರಣೆ

**ಅನುಸೂಚಿ**

## ಕೃಷಿ ಉತ್ಪನ್ನ (ಶ್ರೇಣೀಕರಿಸುವ ಮತ್ತು ಗುರುತು ಹಾಕುವ) ಅಧಿನಿಯಮ, 1937

(1937ರ ಅಧಿನಿಯಮ ಸಂಖ್ಯೆ 1)

[24ನೇ ಫೆಬ್ರವರಿ, 1937]

ಕೃಷಿ ಮತ್ತು ಇತರ ಉತ್ಪನ್ನವನ್ನು ಶ್ರೇಣೀಕರಿಸಲು ಮತ್ತು ಗುರುತು ಹಾಕಲು ಉಪಬಂಧ ಕಲ್ಪಿಸುವ ಅಧಿನಿಯಮ.

ಕೃಷಿ ಮತ್ತು ಇತರ ಉತ್ಪನ್ನವನ್ನು ಶ್ರೇಣೀಕರಿಸಲು ಮತ್ತು ಗುರುತು ಹಾಕಲು ಉಪಬಂಧ ಕಲ್ಪಿಸುವುದು ಯುಕ್ತವಾಗಿರುವುದರಿಂದ;

ಇದು ಈ ಮೂಲಕ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು:-

**1. ಚಿಕ್ಕ ಹೆಸರು ಮತ್ತು ವ್ಯಾಪ್ತಿ.-** (1) ಈ ಅಧಿನಿಯಮವನ್ನು ಕೃಷಿ ಉತ್ಪನ್ನ (ಶ್ರೇಣೀಕರಿಸುವ ಮತ್ತು ಗುರುತು ಹಾಕುವ) ಅಧಿನಿಯಮ, 1937 ಎಂದು ಕರೆಯತಕ್ಕದ್ದು.

(2) ಇದು ಇಡೀ ಭಾರತಕ್ಕೆ ವ್ಯಾಪ್ತವಾಗತಕ್ಕದ್ದು.

**2. ವಿವರಣೆಗಳು.-** ಈ ಅಧಿನಿಯಮದಲ್ಲಿ ವಿಷಯದಿಂದ ಅಥವಾ ಸಂದರ್ಭದಿಂದ ವಿರುದ್ಧವಾದುದು ಏನಾದರೂ ಕಂಡುಬಂದ ಹೊರತು,-

(ಎ) "ಕೃಷಿ ಉತ್ಪನ್ನ" ಎಂಬುದರಲ್ಲಿ ಕೃಷಿಯ ಅಥವಾ ತೋಟಗಾರಿಕೆಯ ಎಲ್ಲ ಉತ್ಪನ್ನ ಮತ್ತು ಅಂಥ ಯಾವುದೇ ಉತ್ಪನ್ನದಿಂದ ಪೂರ್ಣವಾಗಿ ಅಥವಾ ಭಾಗಶಃ ತಯಾರಿಸಲಾದ ಆಹಾರದ ಅಥವಾ ಪಾನೀಯದ ಎಲ್ಲ ವಸ್ತುಗಳು ಮತ್ತು ಪ್ರಾಣಿಗಳ ತೊಗಲು ಅಥವಾ ಚರ್ಮ ಇವು ಒಳಗೊಳ್ಳುತ್ತವೆ;

(ಬಿ) "ಖೋಟಾ" ಎಂಬ ಪದಕ್ಕೆ ಭಾರತ ದಂಡ ಸಂಹಿತೆಯ (1860ರ 45) 28ನೇ ಪ್ರಕರಣದ ಮೂಲಕ ಕೊಟ್ಟಿರುವ ಅರ್ಥವೇ ಇರತಕ್ಕದ್ದು;

(ಸಿ) "ಹೊದಿಕೆ" ಎಂಬುದರಲ್ಲಿ ಯಾವುದೇ ಪಾತ್ರೆ, ಪೆಟ್ಟಿಗೆ, ಕ್ರೇಟು, ಸುತ್ತುಹಾಳೆ, ಟ್ರೇ ಅಥವಾ ಇತರ ಧಾರಕ- ಇವುಗಳನ್ನು ಒಳಗೊಳ್ಳುತ್ತದೆ;

(ಡಿ) "ಶ್ರೇಣಿಯ ಹೆಸರು" ಎಂದರೆ ಯಾವುದೇ ಅನುಸೂಚಿತ ವಸ್ತುವಿನ ಗುಣಮಟ್ಟದ ಸೂಚಕವಾಗಿ ನಿಯಮಿಸಲಾದ ಹೆಸರು;

(ಇ) "ಶ್ರೇಣಿಯ ಹೆಸರಿನ ಗುರುತು" ಎಂದರೆ ಒಂದು ನಿರ್ದಿಷ್ಟ ಶ್ರೇಣಿಯ ಹೆಸರನ್ನು ನಿರೂಪಿಸುವ ಹಾಗೆ ನಿಯಮಿಸಲಾದ ಗುರುತು;

(ಎಫ್) ಯಾವುದೇ ವಸ್ತುವಿಗೆ ಸಂಬಂಧಿಸಿದಂತೆ "ಗುಣಮಟ್ಟ" ಎಂದರೆ ಆ ವಸ್ತುವಿನ ಸ್ಥಿತಿ-ಗತಿ;

(ಜಿ) "ನಿಯಮಿಸಲಾದುದು" ಎಂದರೆ ಈ ಅಧಿನಿಯಮದ ಮೇರೆಗೆ ರಚಿತವಾದ ನಿಯಮಗಳ ಮೂಲಕ ನಿಯಮಿಸಲಾದುದು;

(ಎಚ್) "ಅನುಸೂಚಿತ ವಸ್ತು" ಎಂದರೆ ಅನುಸೂಚಿಯಲ್ಲಿ ಒಳಗೊಂಡಿರುವ ವಸ್ತು;

(ಐ) ವಸ್ತುವಿನ ಮೇಲೆಯೇ ಶ್ರೇಣಿಯ ಹೆಸರಿನ ಗುರುತನ್ನು ಹಾಕಿದ್ದರೆ ಅಥವಾ ಆ ವಸ್ತುವಿನ ಹೊದಿಕೆ ಅಥವಾ ಧಾರಕದ ಮೇಲೆ ಅಥವಾ ಅದಕ್ಕೆ ಅಂಟಿಸಿದ ಚೀಟಿಯ ಮೇಲೆ ಹಾಗೆ ಗುರುತು ಹಾಕಿದ್ದರೆ ಆ ವಸ್ತುವಿಗೆ ಶ್ರೇಣಿಯ ಹೆಸರಿನ ಗುರುತನ್ನು ಹಾಕಲಾಗಿದೆಯೆಂದು ಹೇಳಲಾಗುತ್ತದೆ;

(ಜೆ) ಒಂದು ವಸ್ತುವನ್ನು ಈ ಕೆಳಕಂಡ ಸಂದರ್ಭಗಳಲ್ಲಿ, ಎಂದರೆ,-

(i) ಗುರುತು ಹಾಕಿರುವಂಥ ವಸ್ತುವು ಶ್ರೇಣಿಯ ಹೆಸರಿನ ಬಗ್ಗೆ ನಿಯಮಿಸಲಾದ ಗುಣಮಟ್ಟದ್ದಾಗಿಲ್ಲದಿದ್ದರೆ;

(ii) ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳಿಗೆ ಅನುಸಾರವಾಗಿ ವಿಶ್ಲೇಷಣೆಗಾಗಿ ಮತ್ತು ಶ್ರೇಣಿಯ ಹೆಸರನ್ನು ನಿರ್ಧರಿಸಲು ಮಾದರಿಯನ್ನು ನೀಡಿದ ತರುವಾಯ ಶ್ರೇಣೀಕರಣಕ್ಕಾಗಿ ನೀಡಲಾದ ವಸ್ತುವಿನ ರಚನೆಯನ್ನು ಯಾವುದೇ ರೀತಿ ಬದಲಾಯಿಸಿದ್ದರೆ;

(iii) ವಸ್ತುವನ್ನು ಯಾವುದೇ ರೀತಿಯಲ್ಲಿ ಅಕ್ರಮವಾಗಿ ತಿದ್ದಿದ್ದರೆ; ಮತ್ತು

(iv) ವಸ್ತುವಿಗೆ ಅಂಟಿಸಿದ ಚೀಟಿಯ ಮೇಲೆ ಅಥವಾ ಜಾಹೀರಾತು ಮೂಲಕ ಅಥವಾ ಯಾವುದೇ ಇತರ ರೀತಿಯಲ್ಲಿ ಅದರ ಶ್ರೇಣಿಯ ಹೆಸರಿಗಾಗಿ ನಿಯಮಿಸಲಾದ ಗುಣಮಟ್ಟದ ಬಗ್ಗೆ ಯಾವುದೇ ಸುಳ್ಳು ಕ್ಲೇಮನ್ನು ಮಾಡಿದ್ದರೆ

– ಅದನ್ನು ತಪ್ಪಾಗಿ ಶ್ರೇಣೀಕರಿಸಲಾಗಿದೆ ಎಂದು ಹೇಳಲಾಗುತ್ತದೆ.

**3. ಶ್ರೇಣಿಯ ಹೆಸರುಗಳನ್ನು ನಿಯಮಿಸುವುದು.**– (1) ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಪೂರ್ವಪ್ರಕಟಣೆ ಮಾಡಿದ ತರುವಾಯ, ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸಲು ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಪೂರ್ವೋಕ್ತ ಅಧಿಕಾರದ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ ಅಂಥ ನಿಯಮಗಳು ಈ ಕೆಳಕಂಡ ಎಲ್ಲ ಅಥವಾ ಆ ಪೈಕಿ ಯಾವುದೇ ವಿಷಯಕ್ಕಾಗಿ ಉಪಬಂಧ ಕಲ್ಪಿಸಬಹುದು, ಎಂದರೆ:–

(ಎ) ಯಾವುದೇ ಅನುಸೂಚಿತ ವಸ್ತುವಿನ ಗುಣಮಟ್ಟ ಸೂಚಿಸಲು ಶ್ರೇಣಿಯ ಹೆಸರುಗಳನ್ನು ನಿಗದಿಪಡಿಸುವುದು;

(ಬಿ) ಪ್ರತಿಯೊಂದು ಶ್ರೇಣಿಯ ಹೆಸರಿನ ಮೂಲಕ ಸೂಚಿಸಲಾದ ಗುಣಮಟ್ಟವನ್ನು ವಿವರಿಸುವುದು;

(ಸಿ) ನಿರ್ದಿಷ್ಟ ಶ್ರೇಣಿಯ ಹೆಸರುಗಳನ್ನು ನಿರೂಪಿಸಲು ಶ್ರೇಣಿಯ ಹೆಸರಿನ ಗುರುತನ್ನು ನಿರ್ದಿಷ್ಟಪಡಿಸುವುದು;

(ಡಿ) ಯಾವ ವಸ್ತುವಿನ ಸಂಬಂಧದಲ್ಲಿ ಶ್ರೇಣಿಯ ಹೆಸರಿನ ಗುರುತನ್ನು ನಿಯಮಿಸಲಾಗಿದೆಯೋ ಆ ವಸ್ತುವಿನ ಮೇಲೆ ಅಥವಾ ಯಾವುದೇ ಹೊದಿಕೆಯ ಮೇಲೆ, ಧಾರಕದ ಮೇಲೆ ಅಥವಾ ಯಾವುದೇ ಅಂಥ ವಸ್ತುವಿಗೆ ಅಂಟಿಸಿದ ಚೀಟಿಯ ಮೇಲೆ ಶ್ರೇಣೀಯ ಹೆಸರಿನ ಗುರುತನ್ನು ಹಾಕಲು ಯಾವುವೇ ನಿಯಮಿಸಲಾದ ಷರತ್ತುಗಳಿಗೆ ಒಳಪಟ್ಟು, ವ್ಯಕ್ತಿಗೆ ಅಥವಾ ವ್ಯಕ್ತಿಗಳ ನಿಕಾಯಕ್ಕೆ ಅಧಿಕಾರ ನೀಡುವುದು;

(ಇ) ಯಾವುದೇ ವಸ್ತುವಿನ ಸಂಬಂಧದಲ್ಲಿ ಗುರುತು ಮಾಡುವ ವಿಧಾನ, ವಸ್ತುವನ್ನು ಪ್ಯಾಕ್ ಮಾಡುವ ವಿಧಾನ, ಬಳಸುವ ಹೊದಿಕೆಯ ಮಾದರಿ, ತೂಕದ ಪ್ರಮಾಣ ಅಥವಾ ಪ್ರತಿಯೊಂದು ಹೊದಿಕೆಯಲ್ಲಿ ಸೇರಿಸಬೇಕಾದ ಸಂಖ್ಯೆ ಅಥವಾ ಅನ್ಯಥಾ– ಇವುಗಳಿಗೆ ಸಂಬಂಧಿಸಿದ ಷರತ್ತುಗಳೂ ಸೇರಿ, (ಡಿ) ಖಂಡದಲ್ಲಿ ಉಲ್ಲೇಖಿಸಲಾದ ಷರತ್ತುಗಳನ್ನು ನಿರ್ದಿಷ್ಟಪಡಿಸುವುದು;

(ಎಫ್) ಶ್ರೇಣಿಯ ಹೆಸರಿನ ಗುರುತನ್ನು ನಿರೂಪಿಸಲು ಅವಶ್ಯವಿರುವ ಯಾವುದೇ ಸಲಕರಣೆಯ ತಯಾರಿಕೆ ಅಥವಾ ಬಳಕೆ ಅಥವಾ ಶ್ರೇಣಿಯ ಹೆಸರಿನ ಗುರುತಿನಿಂದ ಗುರುತು ಹಾಕಿದ ಯಾವುದೇ ಹೊದಿಕೆ ಅಥವಾ ಚೀಟಿಯ ತಯಾರಿಕೆ ಅಥವಾ ಬಳಕೆ ಅಥವಾ ಮಾದರಿಗಳನ್ನು ಪರೀಕ್ಷಿಸುವುದು ಮತ್ತು ಅಂಥ ವಸ್ತುಗಳ ಪರಿಶೀಲನೆಯೂ ಸೇರಿದಂತೆ ಶ್ರೇಣಿಯ ಹೆಸರಿನ ಗುರುತಿನಿಂದ ಗುರುತು ಹಾಕಿದ ವಸ್ತುಗಳ ಗುಣಮಟ್ಟವನ್ನು ನಿಯಂತ್ರಿಸುವ ಕ್ರಮಗಳು ಅಥವಾ ಅಂಥ ಯಾವುದೇ ವರ್ಗದ ವಸ್ತುಗಳ ಮಾರಾಟವನ್ನು ಸಂವರ್ಧಿಸಲು ಕೈಗೊಂಡ ಯಾವುದೇ ಪ್ರಚಾರ ಕಾರ್ಯ– ಇವುಗಳಿಗೆ ಸಂಬಂಧಿಸಿದಂತೆ ವಹಿಸಲಾದ ಯಾವುದೇ ವೆಚ್ಚಗಳ ಸಂದಾಯಕ್ಕಾಗಿ ವ್ಯವಸ್ಥೆ ಮಾಡುವುದು;

(ಜಿ) ನಿಯಮಿಸಲಾದ ಷರತ್ತುಗಳಿಗೆ ಅನುಸಾರವಾಗಿರದ ಶ್ರೇಣಿಯ ಹೆಸರಿನ ಗುರುತಿನಿಂದ ಗುರುತು ಹಾಕಿದ ಉತ್ಪನ್ನವನ್ನು ಮುಟ್ಟುಗೋಲು ಹಾಕಿಕೊಳ್ಳಲು ಮತ್ತು ವಿಲೆಮಾಡಲು ವ್ಯವಸ್ಥೆ ಮಾಡುವುದು;

(ಎಚ್) ನಿಯಮಿಸಬೇಕಾದ ಅಥವಾ ನಿಯಮಿಸಬಹುದಾದ ಯಾವುದೇ ಇತರ ವಿಷಯ.

(3) ಈ ಅಧಿನಿಯಮದ ಮೇರೆಗೆ ಕೇಂದ್ರ ಸರ್ಕಾರವು ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ ಸಂಸತ್ತಿನ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ ಒಂದು ಅಧಿವೇಶನದಲ್ಲಿ ಅಥವಾ ನಿರಂತರವಾಗಿ ಬರುವ ಎರಡು ಅಥವಾ ಹೆಚ್ಚಿನ ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಇಡತಕ್ಕದ್ದು, ಮತ್ತು ಮೇಲೆ ಹೇಳಿದ ಅಧಿವೇಶನ ಅಥವಾ ನಿರಂತರವಾಗಿ ಬರುವ ಅಧಿವೇಶನಗಳ ನಿಕಟೋತ್ತರದ ಅಧಿವೇಶನದ ಮುಕ್ತಾಯಕ್ಕೆ ಮುಂಚೆ ಆ

ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಆ ನಿಯಮವನ್ನು ಮಾಡಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ತರುವಾಯ ಆ ನಿಯಮವು ಸಂದರ್ಭಾನುಸಾರ ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗಿರತಕ್ಕದ್ದು ಅಥವಾ ಪರಿಣಾಮಕಾರಿಯಾಗಿರತಕ್ಕದ್ದಲ್ಲ; ಆದಾಗ್ಯೂ, ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮದ ಮೇರೆಗೆ ಈ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟು ಮಾಡತಕ್ಕದ್ದಲ್ಲ.

**3ಎ. ಪ್ರವೇಶ, ಪರಿಶೀಲನೆ ಮತ್ತು ಶೋಧನೆಯ ಅಧಿಕಾರಗಳು.-** (1) ಕೇಂದ್ರ ಸರ್ಕಾರದ ಅಥವಾ ಒಂದು ರಾಜ್ಯ ಸರ್ಕಾರದ ಯಾರೇ ಅಧಿಕಾರಿಯು, ಅಥವಾ ಗೆಜೆಟೆಡ್ ದರ್ಜೆಯ ಅಥವಾ ಅದಕ್ಕೆ ಸಮನಾದ ದರ್ಜೆಯ ಅಧಿಕಾರಿಯಾಗಿದ್ದು, ಕೇಂದ್ರ ಸರ್ಕಾರದಿಂದ ಅಧಿಕೃತವಾದ ಯಾರೇ ಪ್ರಾಧಿಕಾರಿಯು, ಈ ಅಧಿನಿಯಮದ ಯಾವುದೇ ಉಪಬಂಧವನ್ನು ಅಥವಾ ಅದರ ಮೇರೆಗೆ ರಚಿಸಲಾಗಿರುವ ನಿಯಮಗಳನ್ನು ಉಲ್ಲಂಘಿಸಲಾಗಿದೆಯೆಂದು ಅಥವಾ ಉಲ್ಲಂಘಿಸಲಾಗುತ್ತಿದೆಯೆಂದು ನಂಬಲು ಕಾರಣವಿರುವಲ್ಲಿ, ಅವನು ಯಾವುದೇ ಸೂಕ್ತ ಸಮಯದಲ್ಲಿ ಯಾವುದೇ ಕಟ್ಟಡದೊಳಗೆ ಪ್ರವೇಶಿಸಬಹುದು ಮತ್ತು ಯಾವ ಕೃಷಿ ಉತ್ಪನ್ನಗಳ ಸಂಬಂಧದಲ್ಲಿ ಅಂಥ ಉಲ್ಲಂಘನೆ ಮಾಡಲಾಗಿದೆಯೋ ಅಥವಾ ಮಾಡಲಾಗುತ್ತಿದೆಯೋ ಅವುಗಳ ಅವಶ್ಯಕ ಪರಿಶೀಲನೆ ಮತ್ತು ಶೋಧನೆಯನ್ನು ಮಾಡಬಹುದು.

(2) (1)ನೇ ಉಪಪ್ರಕರಣದ ಮೇರೆಗೆ ಮಾಡಿದ ಪ್ರತಿಯೊಂದು ಅಧಿಕೃತಗೊಳಿಸುವಿಕೆಯನ್ನು ದಂಡ ಪ್ರಕ್ರಿಯಾ ಸಂಹಿತೆ, 1973ರ (1974ರ 2) 93ನೇ ಪ್ರಕರಣದಲ್ಲಿ ಉಲ್ಲೇಖಿಸಲಾದ ವಾರಂಟು ಎಂಬುದಾಗಿ ಭಾವಿಸತಕ್ಕದ್ದು.

**3ಬಿ. ಕೃಷಿ ಉತ್ಪನ್ನವನ್ನು ಅಭಿಗ್ರಹಿಸಲು ಅಧಿಕೃತಗೊಂಡ ಅಧಿಕಾರಿಯ ಅಧಿಕಾರಗಳು.-** (1) 3ಎ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಅಧಿಕೃತಗೊಂಡ ಯಾರೇ ಅಧಿಕಾರಿಗೆ, ಯಾವುದೇ ಕೃಷಿ ಉತ್ಪನ್ನದ ಸಂಬಂಧದಲ್ಲಿ ಈ ಅಧಿನಿಯಮದ ಮೇರೆಗೆ ಅಥವಾ ಅದರ ಮೇರೆಗೆ ಮಾಡಿದ ನಿಯಮಗಳ ಮೇರೆಗೆ ಯಾವುದೇ ಅಪರಾಧ ಮಾಡಲಾಗುತ್ತಿದೆಯೆಂದು ಅಥವಾ ಮಾಡಲಾಗಿದೆಯೆಂದು ಕಂಡುಬಂದರೆ ಅಥವಾ ಅಂಥ ಅಪರಾಧ ಮಾಡುವಲ್ಲಿ ಆ ಉತ್ಪನ್ನವನ್ನು ಬಳಸಲು ಉದ್ದೇಶಿಸಿರುವ ಅಥವಾ ಬಳಸುವ ಸಂಭವವಿರುವಲ್ಲಿ, ಅವನು ಅಂಥ ಉತ್ಪನ್ನವನ್ನು ಅಭಿಗ್ರಹಿಸಬಹುದು ಮತ್ತು ಹಿಡಿದಿಟ್ಟುಕೊಳ್ಳಬಹುದು:

ಪರಂತು, ಈ ಉಪಪ್ರಕರಣದ ಮೇರೆಗೆ ಯಾವುದೇ ಕೃಷಿ ಉತ್ಪನ್ನವನ್ನು ಅಭಿಗ್ರಹಿಸಿರುವಾಗ ಅದು ಶೀಘ್ರವಾಗಿ ಅಥವಾ ಸ್ವಾಭಾವಿಕವಾಗಿ ನಾಶ ಹೊಂದುವಂತಿದ್ದರೆ, ಹಾಗೆ ಅಧಿಕೃತಗೊಂಡ ಅಧಿಕಾರಿಯು ಅಂಥ ಉತ್ಪನ್ನವನ್ನು ನಿಯಮಿಸಬಹುದಾದ ರೀತಿಯಲ್ಲಿ ವಿಲೆ ಮಾಡಬಹುದು.

(2) ಈ ಪ್ರಕರಣದ ಮೇರೆಗೆ ಮಾಡಿದ ಪ್ರತಿಯೊಂದು ಅಭಿಗ್ರಹಣಕ್ಕೆ ದಂಡ ಪ್ರಕ್ರಿಯಾ ಸಂಹಿತೆ, 1973ರ (1974ರ 2) 102ನೇ ಪ್ರಕರಣದ ಉಪಬಂಧಗಳು ಅನ್ವಯವಾಗತಕ್ಕದ್ದು.

**4. ಶ್ರೇಣಿ ಹೆಸರಿನ ಗುರುತನ್ನು ಅನಧಿಕೃತವಾಗಿ ಗುರುತು ಮಾಡುವುದಕ್ಕೆ ದಂಡನೆ.-** 3ನೇ ಪ್ರಕರಣದ ಮೇರೆಗೆ ರಚಿಸಲಾದ ನಿಯಮದ ಮೇರೆಗೆ ಶ್ರೇಣಿಯ ಹೆಸರನ್ನು ಗುರುತು ಮಾಡಲು ಅಧಿಕಾರ ಹೊಂದಿರದ ಯಾರೇ ವ್ಯಕ್ತಿಯು ಯಾವುದೇ ಅನುಸೂಚಿತ ವಸ್ತುವಿಗೆ ಶ್ರೇಣಿಯ ಹೆಸರನ್ನು ಗುರುತು ಮಾಡಿದರೆ ಅವನು ಆರು ತಿಂಗಳಿಗೆ ಮೀರದ ಅವಧಿಯ ಕಾರಾವಾಸದಿಂದ ಮತ್ತು ಐದು ಸಾವಿರ ರೂಪಾಯಿಗಳಿಗೆ ಮೀರದ ಜುಲ್ಮಾನೆಯಿಂದ ದಂಡನೀಯನಾಗತಕ್ಕದ್ದು.

**5. ಶ್ರೇಣಿಯ ಹೆಸರಿನ ಗುರುತನ್ನು ಖೋಟಾ ಮಾಡಿ ಹಾಕಿದ್ದಕ್ಕಾಗಿ ದಂಡನೆ.-** ಯಾರೇ ಆಗಲಿ ಯಾವುದೇ ಶ್ರೇಣಿಯ ಹೆಸರಿನ ಗುರುತನ್ನು ಖೋಟಾ ಮಾಡಿ ಹಾಕಿದ್ದರೆ ಅಥವಾ ಶ್ರೇಣಿಯ ಹೆಸರಿನ ಗುರುತನ್ನು ಖೋಟಾ ಮಾಡಿ ಹಾಕುವ ಉದ್ದೇಶಕ್ಕಾಗಿ ಯಾವುದೇ ಬಣ್ಣ, ಪ್ಲೇಟು ಅಥವಾ ಇತರ ಉಪಕರಣವನ್ನು ತನ್ನ ಸ್ವಾಧೀನದಲ್ಲಿ ಹೊಂದಿದ್ದರೆ, ಅವನು ಮೂರು ವರ್ಷಗಳಿಗೆ ಮೀರದ ಅವಧಿಯ ಕಾರಾವಾಸ ಶಿಕ್ಷೆಯಿಂದ ಮತ್ತು ಐದು ಸಾವಿರ ರೂಪಾಯಿಗೆ ಮೀರದ ಜುಲ್ಮಾನೆಯಿಂದ ದಂಡನೀಯನಾಗತಕ್ಕದ್ದು.

**5ಎ. ತಪ್ಪಾಗಿ ಶ್ರೇಣೀಕರಿಸಲಾದ ವಸ್ತುಗಳನ್ನು ಮಾರಾಟ ಮಾಡಿದ್ದಕ್ಕೆ ದಂಡನೆ.-** ಯಾರೇ ಆಗಲಿ ತಪ್ಪಾಗಿ ಶ್ರೇಣೀಕರಿಸಲಾದ ಯಾವುದೇ ಅನುಸೂಚಿತ ವಸ್ತುವನ್ನು ಮಾರಾಟ ಮಾಡಿದರೆ, ಅವನು ಆರು ತಿಂಗಳಿಗೆ ಮೀರದ ಅವಧಿಯವರೆಗಿನ ಕಾರಾವಾಸ ಶಿಕ್ಷೆಯಿಂದ ಮತ್ತು ಐದು ಸಾವಿರ ರೂಪಾಯಿಗೆ ಮೀರದ ಜುಲ್ಮಾನೆಯಿಂದ ದಂಡನೀಯನಾಗತಕ್ಕದ್ದು.

**5ಬಿ. ಕೆಲವು ವಸ್ತುಗಳ ಸಂಬಂಧದಲ್ಲಿ ಕಡ್ಡಾಯವಾಗಿ ಶ್ರೇಣಿಯ ಹೆಸರುಗಳನ್ನು ನಿಯಮಿಸುವ ಅಧಿಕಾರ.-** (1) ಯಾವುದೇ ಅನುಸೂಚಿತ ವಸ್ತುವಿಗೆ ಅಥವಾ ವಸ್ತುಗಳ ವರ್ಗಕ್ಕೆ ಶ್ರೇಣಿಯ ಹೆಸರಿನ ಗುರುತನ್ನು ಹಾಕದ ಹೊರತು ಅಂಥ ಯಾವುದೇ ಅನುಸೂಚಿತ ವಸ್ತುವನ್ನು ಅಥವಾ ವರ್ಗದ ವಸ್ತುಗಳನ್ನು ಮಾರಾಟ ಮಾಡದಿರುವುದು ಅಥವಾ

ವಿತರಣೆ ಮಾಡದಿರುವುದು ಸಾರ್ವಜನಿಕ ಹಿತದೃಷ್ಟಿಯಿಂದ ಅಥವಾ ಗ್ರಾಹಕರ ರಕ್ಷಣೆಯ ದೃಷ್ಟಿಯಿಂದ ಅವಶ್ಯಕವಾಗಿದೆಯೆಂದು ಕೇಂದ್ರ ಸರ್ಕಾರವು ಅಭಿಪ್ರಾಯಪಟ್ಟರೆ, ಅದು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಹಾಗೆಂದು ಘೋಷಣೆ ಮಾಡಬಹುದು.

(2) (1)ನೇ ಉಪಪ್ರಕರಣದ ಮೇರೆಗೆ ಹೊರಡಿಸಿದ ಯಾವುದೇ ಅಧಿಸೂಚನೆಯು ಯಾವ ಪ್ರದೇಶ ಅಥವಾ ಪ್ರದೇಶಗಳ ಸಂಬಂಧದಲ್ಲಿ ಪರಿಣಾಮ ಹೊಂದಿರುತ್ತದೆ ಎಂಬುದನ್ನು ನಿರ್ದಿಷ್ಟಪಡಿಸತಕ್ಕದ್ದು.

(3) ಯಾವುದೇ ಪ್ರದೇಶ ಅಥವಾ ಪ್ರದೇಶಗಳ ಸಂಬಂಧದಲ್ಲಿ (1)ನೇ ಉಪಪ್ರಕರಣದ ಮೇರೆಗೆ ಒಂದು ಅಧಿಸೂಚನೆಯನ್ನು ಹೊರಡಿಸಿರುವಲ್ಲಿ, ಯಾರೇ ವ್ಯಕ್ತಿಯು ಅಂಥ ಪ್ರದೇಶ ಅಥವಾ ಪ್ರದೇಶಗಳಲ್ಲಿ ಯಾವುದೇ ಅನುಸೂಚಿತ ವಸ್ತು ಅಥವಾ ಅದರ ವರ್ಗದ ವಸ್ತುವನ್ನು ಈ ಅಧಿನಿಯಮದ ಉಪಬಂಧಗಳ ಅಥವಾ ಅದರ ಮೇರೆಗೆ ರಚಿಸಲಾದ ನಿಯಮಗಳ ಅನುಸಾರವಾಗಿ ಅಲ್ಲದೆ ಮಾರಾಟ ಮಾಡತಕ್ಕದ್ದಲ್ಲ ಅಥವಾ ಮಾರಾಟಕ್ಕೆ ನೀಡತಕ್ಕದ್ದಲ್ಲ ಅಥವಾ ವಿತರಣೆ ಮಾಡತಕ್ಕದ್ದಲ್ಲ ಅಥವಾ ವಿತರಣೆಗೆ ನೀಡತಕ್ಕದ್ದಲ್ಲ.

(4) ಈ ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸುವ ಯಾರೇ ವ್ಯಕ್ತಿಯು, ಆರು ತಿಂಗಳಿಗೆ ಮೀರದ ಅವಧಿಯ ಕಾರಾವಾಸ ಶಿಕ್ಷೆಯಿಂದ ಮತ್ತು ಐದು ಸಾವಿರ ರೂಪಾಯಿಗಳಿಗೆ ಮೀರದ ಜುಲ್ಮಾನೆಯಿಂದ ದಂಡನೀಯನಾಗತಕ್ಕದ್ದು.

**5ಸಿ. ಪ್ರಾಸಿಕ್ಯೂಷನ್ ಹೂಡುವುದು.**- ಯಾವುದೇ ನ್ಯಾಯಾಲಯವು,-

(ಎ) ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರ ಅಥವಾ ಅದರಿಂದ ಲಿಖಿತದ ಮೂಲಕ ಅಧಿಕೃತನಾದ ಯಾರೇ ವ್ಯಕ್ತಿಯು; ಅಥವಾ

(ಬಿ) ಬಾಧಿತನಾದ ವ್ಯಕ್ತಿಯು; ಅಥವಾ

(ಸಿ) ಬಾಧಿತನಾದ ವ್ಯಕ್ತಿಯು ಮನ್ನಣೆ ಪಡೆದ ಗ್ರಾಹಕ ಸಂಸ್ಥೆಯ ಸದಸ್ಯನಾಗಿರಲಿ ಅಥವಾ ಆಗಿಲ್ಲದಿರಲಿ, ಅಂಥ ಸಂಸ್ಥೆಯು

- ಲಿಖಿತ ದೂರನ್ನು ಸಲ್ಲಿಸಿದ ಹೊರತು, ಈ ಅಧಿನಿಯಮದ ಮೇರೆಗೆ ದಂಡನೀಯವಾದ ಅಪರಾಧವನ್ನು ಸಂಜ್ಞಾನಕ್ಕೆ ತೆಗೆದುಕೊಳ್ಳತಕ್ಕದ್ದಲ್ಲ.

**ವಿವರಣೆ:**- ಈ ಪ್ರಕರಣದ ಉದ್ದೇಶಗಳಿಗಾಗಿ "ಮನ್ನಣೆ ಪಡೆದ ಗ್ರಾಹಕ ಸಂಸ್ಥೆ" ಎಂದರೆ, ಕಂಪನಿಗಳ ಅಧಿನಿಯಮ, 1956ರ (1956ರ 1) ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಮೇರೆಗೆ ನೋಂದಾಯಿತವಾದ ಒಂದು ಸ್ವಯಂಸೇವಾ ಗ್ರಾಹಕ ಸಂಸ್ಥೆ.

**6. ಅಧಿನಿಯಮದ ಅನ್ವಯದ ವಿಸ್ತರಣೆ.**- ಹಿತಾಸಕ್ತಿಗಳಿಗೆ ಬಾಧಕ ಉಂಟಾಗುವ ಸಂಭವವಿರುವಲ್ಲಿ, ಆ ಹಿತಾಸಕ್ತಿಗಳ ಸಂಬಂಧದಲ್ಲಿ, ಕೇಂದ್ರ ಸರ್ಕಾರವು, ತಾನು ಸೂಕ್ತವೆಂದು ಭಾವಿಸುವಂಥ ಸಮಾಲೋಚನೆಯ ತರುವಾಯ, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಈ ಅಧಿನಿಯಮದ ಉಪಬಂಧಗಳು ಅನುಸೂಚಿಯಲ್ಲಿ ಸೇರಿಸಿರದ ಕೃಷಿ ಉತ್ಪನ್ನದ ವಸ್ತುವಿಗೆ ಅಥವಾ ಕೃಷಿ ಉತ್ಪನ್ನದ ವಸ್ತುವಾಗಿರದ ವಸ್ತುವಿಗೆ ಅನ್ವಯಿಸತಕ್ಕುದೆಂದು ಘೋಷಿಸಬಹುದು ಮತ್ತು ಅಂಥ ಅಧಿಸೂಚನೆಯನ್ನು ಪ್ರಕಟಿಸಿದ ತರುವಾಯ, ಅಂಥ ವಸ್ತುವನ್ನು ಅನುಸೂಚಿಯಲ್ಲಿ ಸೇರಿಸಲಾಗಿದೆಯೆಂದು ಭಾವಿಸತಕ್ಕದ್ದು.

## ಅನುಸೂಚಿ

**(2ನೇ ಪ್ರಕರಣ ನೋಡಿ)**

1. ಹಣ್ಣು
2. ತರಕಾರಿ
3. ಮೊಟ್ಟೆ
4. ಹೈನು ಉತ್ಪನ್ನ
5. ತಂಬಾಕು
6. ಕಾಫಿ
7. ತೊಗಲು ಮತ್ತು ಚರ್ಮ
8. ಹಣ್ಣಿನ ಉತ್ಪನ್ನಗಳು
9. ಹಿಟ್ಟು
10. ಎಣ್ಣೆ ಬೀಜಗಳು
11. ವನಸ್ಪತಿ ತೈಲಗಳು (ಜಲಜನಕಯುಕ್ತ ತೈಲ ಮತ್ತು ವನಸ್ಪತಿ ಕೊಬ್ಬೂ ಸೇರಿದಂತೆ)
12. ಹತ್ತಿ
13. ಅಕ್ಕಿ
14. ಅರಗು
15. ಗೋಧಿ
16. ಸೆಣಬು
17. ಬೆಲ್ಲ
18. ಅಳಲೆಕಾಯಿ
19. ಬೂರಾ ಸಕ್ಕರೆ
20. ಉಣ್ಣೆ ಹಾಗೂ ಮೇಕೆ ಕೂದಲು
21. ಬಿರುಗೂದಲು
22. ಕರ್ಪೂರ ರಾಳ ಹಾಗೂ ಟರ್ಪೆಂಟೈನ್
23. ಅಡಿಕೆ
24. ಸುಗಂಧ ತೈಲ
25. ಗೋಡಂಬಿ
26. ಏಲಕ್ಕಿ
27. ಮೆಣಸು
28. ಶುಂಠಿ
29. ಜೇನುತುಪ್ಪ
30. ಸಾಂಬಾರ ಪುಡಿ

31. ಬೂರುಗದ ಹತ್ತಿ
32. ಕಚ್ಚಾ ಸೆಣಬು
33. ಬತ್ತ
34. ಸಾವೆ
35. ಮೆಸ್ತ
36. ಮೆಣಸಿನಕಾಯಿ
37. ಅರಿಶಿಣ
38. ಮರಗೆಣಸಿನ ಚಿಪ್ಸ್ ಮತ್ತು ಮರಗೆಣಸಿನ ಹಿಟ್ಟು
39. ಕತ್ತಾಳೆ ಮತ್ತು ಲೋಳಿಸರದ ನಾರು
40. ಹಿಂಡಿ
41. ಮಸಾಲೆ ವಸ್ತುಗಳು ಮತ್ತು ಸಾಂಬಾರ ಪದಾರ್ಥಗಳು (ಅಧಿನಿಯಮದ ಉಪಬಂಧಗಳನ್ನು ಈಗಾಗಲೇ ಅನ್ವಯಿಸಲಾಗಿರುವ ಮೆಣಸು, ಶುಂಠಿ, ಗೋಡಂಬಿ, ಏಲಕ್ಕಿ, ಮೆಣಸಿನಕಾಯಿ ಮತ್ತು ಅರಿಶಿನ–ಇವುಗಳನ್ನು ಹೊರತುಪಡಿಸಿ)
42. ದ್ವಿದಳ ಧಾನ್ಯಗಳು
43. ಆಕ್ರೋಡು
44. ಪ್ರಾಣಿ ಹೊದಿಕೆ (ದನ, ಎಮ್ಮೆಕೋಣ, ಕುರಿ, ಮೇಕೆ ಮತ್ತು ಹಂದಿ)
45. ಗುರಗೋಂದು
46. ಕರಯಾ ಗೋಂದು
47. ಸೋನಾಮುಖಿ ಎಲೆ ಮತ್ತು ಬೀಜಕೋಶ
48. ತಾಳೆ ನಾರು
49. ಕಾಚು
50. ತೆಂಡು ಎಲೆ
51. ವಾಟರ್ ಚೆಸ್ಟ್‌ನಟ್
52. ಅಣಬೆ
53. ಗಸಗಸೆ
54. ಗೇರೆಣ್ಣೆ (ದ್ರವ)
55. ಜೇನು ಮೇಣ
56. ಕಡಲೆ (ಸೈಸರ್ ಅರಿಯೇಟಿನಂ)
57. ಜೋಳ (ಸೊರ್ಗಂ ವಲ್ಗರೆ)
58. ಮೆಕ್ಕೆಜೋಳ (ಜೀ ಮೇಸ್)
59. ಬಾರ್ಲಿ (ಹೋರ್ಡಿಯಂ ವಲ್ಗರೆ)
60. ರಾಗಿ (ಎಲೆಯೂಸಿಯೋ ಕೋರಕಾನಾ)

61. ಸಜ್ಜೆ (ಪೆನ್ನಿಸೆಟಮ್ ಟೈಫಾಯಿಡ್ಸ್)

62. ಸೀಗೆಕಾಯಿ ಪುಡಿ

63. ಮಿಶ್ರ ಇಂಗು

* * *